Regd No B 155 Sn 1—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಆರ್.ಸಿ.ಸಿರಸ್ತೇದಾರ್ ಎಂ ವಿ ಶುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಿಣಿ ಎಂ ಎಸ್ ಕೃಷ್ಣರಾವ್ 2ನೆ

ಮುನಿಸಿಪಲ್ ಪ್ರೆಸ್ ನೋಟು

ವೈಸೂರು — ಅಶೋಕ ಚಕ್ರವರ್ತಿಯಲ್ಲಿ ರುವ ಕಬ್ಬಿಣ್ಣ ಮತ್ತು ಬಣ್ಣದ ವ್ಯಾಪಾರಿಗಳು ರೂ 501, ಲ್ಯಾಕ್ಸ್‌ಡೌನ್ ಬಿಲ್ಡಿಂಗಿನಲ್ಲಿರುವ ಫಲಾವೃಕ್ಷ ಪ್ರೊಪ್ರೈಟರ್ ಶ್ರೀ ಗಂಡಭ್ಯನವರು ರೂ 101, ಮಾಧವ ರಾವ್ ಸರ್ಕಲ್‌ನಲ್ಲಿರುವ ಲೋಟಸ್ ಪಾಂಡ್ ಪ್ರೊಪ್ರೈಟರ್ ಶ್ರೀ ಕೃಷ್ಣಯಂಗಾರ್ ರೂ 101 ಇವರು ಅಸ್ಪತ್ರೆಯಲ್ಲಿ ಕಾಲರಾ ಚಿಕಿತ್ಸೆಗಾಗಿ ಸೇರಿಸಲ್ಪಟ್ಟವರಿಗೆ ಔಷಧಿ ಕೊಳ್ಳುವುದಕ್ಕೆ ಉಪಯೋಗಿಸಲು ಮುನಿಸಿಪಲ್ ಕಮಿಷನರಿಗೆ ಶನಿವಾರ ಕೊಟ್ಟರು ; ಕಮಿಷನರು ಕೃತಜ್ಞತಾಪೂರ್ವ ಸ್ವೀಕರಿಸಿ ಹಾಗೇ ಮಾಡುವುದಾಗಿ ತಿಳಿಸಿದರು ; ಈ ಬಗ್ಗೆ ಮುನಿಸಿಪಲ್ ಕಮಿಷನರು ಪ್ರತ್ಯೇಕ ಬ್ಯಾಂಕು ಲೆಖ್ಖ ತೆಗೆದಿದ್ದಾರೆ.

★

ಅಕ್ಕಮಣಕ್ಕೆ ಅವಕಾಶವಿಲ್ಲ

ಕಲ್ಕತ್ತಾ — ತ್ರಿಪುರಾದಲ್ಲಿನ ಬಲೊಸಿಯಾಪಲ್ಲಿ ಪಾಕಿಸ್ತಾನದ ಅಕ್ರಮಣಕ್ಕೆ ಅವಕಾಶ ಕೊಡದಿರಲು ಸರ್ಕಾರ ನಿರ್ಧರಿಸಿದೆ.

❋

ಚೀಣೀಯರು ಬರುತ್ತಿರುವರು

ನವದೆಹಲಿ — ಪೂರ್ವ ಮುಕ್ತ ಪತ್ರಿಕಾಸ್ಥಾನಗಳಿಗೆ ಚೀಣೀಯರು ಹಜ್ಜೆಹಜ್ಜಾಗಿ ಬಂದು ಸೇರುತ್ತಿರುವರು

★

ಉತ್ತರ ಪ್ರದೇಶದಲ್ಲಿ ಕಾರ್ಮಿಕರಿಗೆ ಕ್ಷೇಡ 55 ಗೋಧಿ ಮತ್ತು 45 ಹಣ ಅಲ್ಲಿಸಲು ಯೋಜಿಸಲಾಗಿದೆ

❋

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಪ್ರಶ್ನಾಸಮುದ್ರಾಪಾರಾವಾರ್ಣ ಧರ್ಮಾಧಿಕಾರಿ
ವಿಜಯಕಾರ್ಯಾಪಕ್ಷ, ಜ್ಯೋತಿರ್ವಿದ್ವನ್ಮಣಿ
ಸುಂಪಕ್ಕ ಕೃಷ್ಣಜೋಯಿಸರಿಂದ

2 ಷ ಧನಾಂಶದಿಗೆ ಆರಂಭ

ಖೈದಿಗಳ ಔದಾರ್ಯ

ಜೈಲಿನ ಖೈದಿಗಳು ತಾವು ನೆಯ್ದ 1000 ನೂಲುರು ಬಟ್ಟೆಯನ್ನು ಹಿಡಕಲ್ಲಿನಲ್ಲಿನ ಲಿಂಗವ ಪೂರ್ವ ಪಾಕಿಸ್ತಾನಿ ನಿರಾಶ್ರಿತರಿಗೆ ಉದಾರ ದಾನವಾಗಿ ಮಾಡಿದರು.

★

ವಿಐಪಿ ಉಪಚಾರ

ಜಮ್ಮು — ಷೇಕ್ ಅಬ್ದುಲ್ಲಾರವರಿಗೆ ಬಹಳ ಪ್ರಮುಖ ವ್ಯಕ್ತಿಗಳಿಗೆ ಕೊಡುವ ಉಪಚಾರ ನೀಡುವುದನ್ನು ಜನಸಂಘದ ಕಾರ್ಯದರ್ಶಿ ವಿರೋಧಿಸುವುದಾಗಿ ಖಂಡಿಸಿದರು

20 ಸಾವಿರ ಸಾವು

ಕರಾಚಿ — ಪೂರ್ವ ಪಾಕಿಸ್ತಾನದಲ್ಲಿ ಈಚೆಗೆ ಆದ ಚಂಡಮಾರುತದಿಂದ 20000 ಜನ ಮೃತ್ಯುವಾದರೆಂದು ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯ ಸದಸ್ಯರೊಬ್ಬರು ಹೇಳಿದರು.

'ಹೊಸ ಕುಕರ್'

ನವದೆಹಲಿ — 35 ರಿಂದ 40 ಜನರಿಗೆ ಎರಡೂವರೆ ಗಂಟೆಯಲ್ಲಿ ಅಡಿಗೆ ಮಾಡಬಹುದಾದ ಕುಕರನ್ನು ರಕ್ಷಣಾ ಶಾಖೆ ತಯಾರಿಸಿದೆ

❋

40 ಗಂಟೆ ಈಜಿತ

ವೆಲ್ಲೂರ್ — 16 ವರ್ಷದ ಟಿರಾತ್ ಕ್ಲಬ್ ಮತ್ತು 17 ವರ್ಷದ ಟೀನ ವುಡ್‌ರಾಫ್ಸ್ ನಿರಂತರ 40 ಗಂಟೆಗಳ ಕಾಲ ಈಕ್ ಎಂಡ್ ರೋಲ್ ನೃತ್ಯ ನಡೆಸಿದರು.

❋

ಸಿಮೆಂಟು ಬೆಲೆ

ನವದೆಹಲಿ — ಭಾರತ ಸರಕಾರವು ಸಿಮೆಂಟು ಬೆಲೆಯನ್ನು ಸ್ವಲ್ಪ ಹೆಚ್ಚಿಸಿದೆ

★

1800 ಡಾಕರುಗಳ ಸಾಮೂಹಿಕ ರಾಜೀನಾಮೆ !

★

ಕಳ್ಳ ಸಾಗಾಣಿಕೆ ಸಾವಾನು

ಕಲ್ಕತ್ತಾ — ಹೇಸ್ಟಿಂಗ್ಸ್ ಕಡಲು ನಿಲ್ದಾಣದ ಸ್ಥಳದಲ್ಲಿಗೆ ತಂಗಿರುವ ಪಾಕಿಸ್ತಾನಿ ಹಡಗಿನಿಂದ ರೂ 20 ಸಾವಿರ ಬೆಲೆಯ ಕಳ್ಳ ಸಾಗಾಣಿಕೆ ವಸ್ತುಗಳು ಕೈಗಡಿಯಾರ, ಸಿಗರೇಟು, ಥರ್ಮಾಮೀಟರ್, ಪಾಕ'ಹಣ, ಭಂಗಾರದ ಅಭರಣಗಳನ್ನು ಕಸ್ಟಂಸಿನವರು ವಶಪಡಿಸಿಕೊಂಡರು.

ಖೈದಿಯ ಇಚ್ಛೆಯಂತೆ ಸಜೆ

ಸಿಡ್ನಿ — ಚಾಕೊಲೇಟುಗಳ್ಳತನ ಮಾಡಿದ್ದ ಖೈದಿಯನ್ನು, ನಿನಗೆ ಇದಕ್ಕೇನು ಮಾಡಬೇಕೆಂದು ಕೇಳಲು, ಖೈದಿ ಫೈಡ್ರಿಕ್ 6 ತಿಂಗಳು ಸಜೆ ಸ್ಟಿಎಂದನು : ಜಡ್ಜರು ಅವನು ಹೇಳಿದಂತೆ ಅವನಿಗೆ 6 ತಿಂಗಳ ಸಜೆ ವಿಧಿಸಿದರು.

ಭೀಕರ ಅಗ್ನಿ ಅನಾಹುತ

ತಿರುಪತಿ — ಇಲ್ಲಿಗೆ 11 ಮೈಲಿ ದೂರದ ಗುತ್ತಿಗಾರಿಪಾಳ್ಯ ಗ್ರಾಮದಲ್ಲಿ ಭಾನುವಾರ ಭೀಕರ ಅಗ್ನಿ ಅನಾಹುತದಿಂದ ಮುಂದಿ ಸತ್ತು ಒಬ್ಬ ತೀವ್ರ ಗಾಯಗೊಂಡನು — ಅನೇಕ ಗುಡಿಸಲುಗಳು ನಿರ್ನಾಮವಾದವು — 1500 ಚೀಲ ಭತ್ತ, 1200 ಚೀಲ ಕಡಲೇಕಾಯಿ 1500 ಚೀಲ ಅರಿಸಿದ ಸುಟ್ಟುಹೋಯಿತು — ರೂ 10 ಲಕ್ಷ ನಷ್ಟವಾಗಿದೆ.

ನವದೆಹಲಿ — ಈ ವರ್ಷದ ಕಡೆಯಿಂದ ಸೀಮೆ ಎಣ್ಣೆ ಅಮದು ಕಡಮೆ ಮಾಡಲಾಗುತ್ತಿ

ಪಾಟ್ನಾ — ನೂರು ಮಹಿಳಾ ಡಾಕ್ಟರುಗಳೂ ಸೇರಿ 1800 ಡಾಕ್ಟರುಗಳು ತಮ್ಮ ಸಂಬಳದ ಸ್ಕೇಲು, ತಮ್ಮ ಸರ್ವಿಸ್ಸು ನಿಯಮಗಳ ಉತ್ತಮತೆಯ ಕೇಳಿಗಾಗಿಯೂ ಒತ್ತಾಯ ಪಡಿಸಲು ಜುಲೈ 1 ರಿಂದ ತಮ್ಮ ಕೆಲಸಕ್ಕೆ ಸಾಮೂಹಿಕ ರಾಜೀನಾಮೆ ಕೊಡಲಿರುವರೆಂದು ವರದಿಯಾಗಿದೆ.

★

ರೂ 16 ಲಕ್ಷ

ಬೊಂಬಾಯಿ — ದಾಳರು ಭಾಗದಲ್ಲಿ ಒಂದು ನಿವಾಸದಲ್ಲಿ ಪೋಲೀಸರು 16 ಲಕ್ಷ ರೂಗಳ ಅಕ್ರಮ ಸಾಗಾಣಿಕೆ ಚಿನ್ನ ವಶಪಡಿಸಿಕೊಂಡಿದ್ದಾರೆ.

ಬೋನಸ್ ಅಜ್ಜಿ

ನವದೆಹಲಿ — 20 ಕ್ಕಿಂತ ಹೆಚ್ಚು ಸಿಬ್ಬಂದಿಯನ್ನು ಇಟ್ಟುಕೊಂಡಿರುವವರು ಅವರಿಗೆ ಕನಿಷ್ಠ ಬೋನಸ್ಸು ಸಂಬಳದ ಶೇಕಡಾ 4 ರಷ್ಟು ಮತ್ತು ಶುಟ್ಟೇಭತ್ಯವನ್ನು ಅಥವಾ ರೂ 4 (ಚಿಕ್ಕಮಗಳೂರಿಗೆ ರೂ 25) ಕೊಡಬೇಕೆಂಬ ಶಾಸನವನ್ನು ಭಾರತ ಸರಕಾರ ಜಾರಿಮಾಡಿದೆ

❋

ಗೋಧಿ ಪದಾರ್ಥಗಳು ಬಿದ್ದಿವೆ

ಮದರಾಸು — ಆಹಾರ ಕಾರ್ಪೋರೇಷನ್ನಿನವರಿಗೆ ತಯಾರಿಸಿದ ಗೋಧಿ ಪದಾರ್ಥಗಳು ವಿಲ್ಲುಗಳಲ್ಲಿ ರಾಶಿಗಟ್ಟಿ ಬಿದ್ದಿವೆ ; ಕಾರಣ, ಒಟ್ಟಾಪೆ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಅವನ್ನು ಪಡೆಯಲು ನಿಗದಿ ಅಜ್ಜಿ ಕೊಟ್ಟಿಲ್ಲ.

ಬಡಕ — ಒಂದು ಟೈಂ ಬಾಂಬು ಸಿಡಿದು ವಿಮಾನ ನಿಲ್ದಾಣಬಲ್ಲಿದ್ದ ಒಂದು ಖಾಲಿ ವಿಮಾನ ಚೂರಾಯಿತು,

ಶಾಸ್ತ್ರಧರ್ಮ ಪ್ರಚಾರ ಸಭಾ

Shastra Dharma Prachar Sabha

(ಮುಂದುವರಿದದ್ದು)

ಧರ್ಮ ಎಂಬ ದು ನಮ್ಮ ಕಣ್ಣಿಗೆ ಕಾಣಿಸದಿದ್ದರೂ ಅದರ ಫಲವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿರುತ್ತೆ ; ಈಗ್ಗೆ 18 ವರ್ಷಗಳಿಂದ ನಾವು ಧರ್ಮವನ್ನು ಕೆಲವು ಕಡೆಗಾಗಿ ಬಿಡುತ್ತಾ ಬರುತ್ತಿದ್ದೇವೆ : ಅದೇ ರೀತಿಯಾಗಿ ಅಹಂಕಾರಭಾವ ಅತ್ಯಾಚಾರಗಳು, ಕಳ್ಳತನ, ದರೋಡೆ, ಅಶಾಂತಿ, ದುರ್ಭಿಕ್ಷ ಮುಂತಾದ ಫಲಗಳ ಹೆಚ್ಚು ಹೆಚ್ಚಾಗಿ ಕಾಣುತ್ತಿದ್ದೇವೆಷ್ಟೆ ; ' ಧರ್ಮ ಧರ್ಮ ' ಎಂದು ಕುಳಿತುಕೊಂಡಿದ್ದರೆ ಹೊಟ್ಟೆಗೆ ಪಾಡು ನಡೆಯುವುದು ಹೇಗೆ ? ಎಂದು ಕೆಲವರು ಪ್ರಶ್ನಿಸುತ್ತಾರೆ : ಧರ್ಮದ ಬಗ್ಗೆ ಅವರಿಗಿರುವ ಅಜ್ಞಾನವನ್ನು ಮಾತ್ರ ಇದು ತೋರಿಸುತ್ತದೆ : ಧರ್ಮವೆಂದರೆ ಪಾತಂಜಲಿ ಯೋಗಶಾಸ್ತ್ರವನ್ನು ಅಭ್ಯಾಸಮಾಡಿ ಕಾಡಿನಲ್ಲಿ ಯೋಗಾಭ್ಯಾಸ ಮಾತ್ರವೇಕೆಂದಾಗಲೀ ಮನೆಮಠ ತೊರೆದು ಸನ್ಯಾಸಿಯೊಗ ವುದಾಗಲೀ ಅಲ್ಲ : ಆ ಮಾರ್ಗವನ್ನು ಹೊಂದುವವರು ಕೇವಲ ಕೆಲವಾರು ಜನರು ಮಾತ್ರ ; ನಾವು ಸಾಂಸಾರಿಕ ಜೀವನವನ್ನು ನಡೆಸುವಾಗಲೇ ನಾವು ನಡೆಯಬೇಕಾದ ಧರ್ಮಮಾರ್ಗ ಉಂಟು ; ತಂದೆಯು ತನ್ನ ಮಕ್ಕಳನ್ನು ರಕ್ಷಣೆ ಮಾಡುವುದೂ ಧರ್ಮ, ಗಂಡನು ಹೆಂಡತಿಯನ್ನು ಸಂರಕ್ಷಿಸುವುದೂ ಹೆಂಡತಿಯು ಗಂಡನಿಗೆ ಶುಶ್ರೂಷೆ ಮಾಡುವುದು ಧರ್ಮ, ಮಕ್ಕಳು ತಂದೆತಾಯಿಗಳನ್ನು ವೃದ್ಧಾಪ್ಯ ಕಾಲದಲ್ಲಿ ಕಾಪಾಡುವುದೂ ಧರ್ಮ, ವ್ಯವಹಾರದಲ್ಲಿ ಸತ್ಯವನ್ನೇ ಹೇಳುವುದೂ ಪ್ರಾಮಾಣಿಕನಾಗಿರುವುದೂ ಮುಂತಾದ ಧರ್ಮಗಳನ್ನು ಅನುಸರಿಸುವುದಿಂದ ಸಮಾಜದಲ್ಲಿ ಗೌರವವೂ, ಆ ವ್ಯಕ್ತಿಗೆ ಮನಶ್ಶಾಂತಿಯೂ ಇರುತ್ತದೆ : ರಾಜನು ದಷ್ಟರನ್ನು ಮಾತ್ರವೇ ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವುದು, ಬ್ರಾಹ್ಮಣರಿಗಳು ಪದಾರ್ಥಗಳಿಗೆ ಕಲ್ಲು ಮುಂತಾದುವುಗಳನ್ನು ಬೆರಕೆ ಮಾಡದೇ ಶುದ್ಧ ಪದಾರ್ಥವನ್ನು ಮಾರುವುದೂ ಧರ್ಮವೇನೇ : ಬ್ರಾಹ್ಮಣನು ಕ್ಷತ್ರಿಯರಲ್ಲಿ ಯೂ ಕ್ರೋಧವಾಡದೇ ಕಟಿಲತನವನ್ನಾಶ್ರಯಿಸದೇ, ಎಲ್ಲರಿಗೂ ಕ್ಷೇಮವುಂಟಾಗಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡುವುದು ಧರ್ಮ ; ಸರಕಾರಿ ಅಧಿಕಾರಿಯು ಲಂಚಕ್ಕೆ ಅಸದೃಶನಾಗಿ ಕೆಲಸ ಮಾಡುವುದೂ ಧರ್ಮ, ವೈದ್ಯನು ಜಿಮಾನ್ದಾರನಿಗೆ ಮೋಸಮಾಡದೇ ಇರುವುದೂ ಜಿಮಾನ್ದಾರನು ವೈದ್ಯನಿಗೆ ಮೋಸಮಾಡದೇ ಇರುವುದೂ ಧರ್ಮ : ಈ ರೀತಿಯ ಧರ್ಮ ಸೂತ್ರಗಳನ್ನು ತಿಳಿದು ಅದರಂತೆ ಪ್ರತಿಯೊಬ್ಬರೂ ನಡೆದಲ್ಲಿ ಮಾತ್ರ ಮನಶ್ಶಾಂತಿ, ಸುಭಿಕ್ಷ ಮುಂತಾದುವನ್ನು ಕಾಣಬಹುದು. ಅದು ಬಿಟ್ಟು ಇನ್ನು ಎಷ್ಟು ಯೋಜನೆಗಳಾಡಿದರೂ, ಎಷ್ಟು ಸಹಸ್ರ ರೂಪಾಯಿಗಳನ್ನು ಸಂಪಾದಿಸಿದರೂ, ಮಾನಸಿಕ ಅಶಾಂತಿ, ದುರ್ಭಿಕ್ಷ, ಬೆಲೆ ಏರಿಕೆ, ಅಕ್ಕಿಕಷ್ಟಗಳು ಮುಂತಾದುವನ್ನು ತಪ್ಪಿಸಲು ಸಾಧ್ಯವಾಗಲಾರದು,

(ಮುಂದುವರಿಯುವುದು)

Help The Gorakshana

★

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

★

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ ; 'ಗೋರಕ್ಷಣ' ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ಧನ್ಯವಾದಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ ಜನಪ್ರಿಯ 2 ನೇ ವಾರ

ಶಿ ನ ಕಿಕ್ಕಿರಿದ ಜನಮಂಡಣಿಗೆ ಪ್ರದರ್ಶನ

ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) **Janwar**

ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪಾತ್ರವಹಿಸಿರುವರು

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಬಬ್ಬಿ ಸೋಸಿಲ್

ಆಪೆರಾ 28—5—65 ರಿಂದ

ಅತ್ಯಮೋಘ ಕನ್ನಡ ಚಿತ್ರಕಥೆ — ದಿನ 3 ಆಟಗಳು

ನನ್ನ ಕರ್ತವ್ಯ [ಕನ್ನಡ]

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು, ಚಂದ್ರಬಾಬು, ಸಂಧ್ಯಾ, ಜಯ ಲಲಿತ,

SHAKTI SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camarajapuram Mysore 4